**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 16/10/20

## ಐದು ವಿಧೇಯಕಗಳಿಗೆ ರಾಜ್ಯಪಾಲರ ಅಸ್ತು

ವಿ.ವಾ. 16-10-2020

**ಬೆಂಗಳೂರು:** ವಿಧಾನಮಂಡಲ ಅಧಿವೇಶನದಲ್ಲಿ ಒಪ್ಪಿಗೊಂಡಿದ್ದ ವಿವಿಧ ವಿಧೇಯಕಗಳಿಗೆ ರಾಜ್ಯಪಾಲರು ಸಹಿ ಹಾಕಿ ಅನುಮೋದಿಸಿದ್ದು, ರಾಜ್ಯಪತ್ರ ಪ್ರಕಟಗೊಂಡಿವೆ. ಕರ್ನಾಟಕ ಸರಕು ಮತ್ತು ಸೇವೆ (ತಿದ್ದುಪಡಿ) ಕಾಯ್ದೆ,



ಕರ್ನಾಟಕ ತುರ್ತು ನಿಧಿ (ತಿದ್ದುಪಡಿ) ಕಾಯ್ದೆ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಕಾಯ್ದೆ, ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ, ಧನವಿನಿಯೋಗ (ನಂ.3)ಕ್ಕೆ ರಾಜ್ಯಪಾಲರ ಅಂಕಿತ ಬಿದ್ದಿದೆ. ಕರೊನಾ ಹಿನ್ನೆಲೆ ತುರ್ತು ನಿಧಿಯನ್ನು 500 ಕೋಟಿ ರೂ.ವರೆಗೆ ವೆಚ್ಚ ಮಾಡಲು ಅವಕಾಶ ಮಾಡಿಕೊಂಡಿರುವುದು, 2020-21ನೇ ಆರ್ಥಿಕ ವರ್ಷದ ಅವಧಿಯಲ್ಲಿ ವಿತ್ತ ಕೊರತೆ ರಾಜ್ಯದ ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇ.5 ಮೀರತಕ್ಕದ್ದಲ್ಲ ಎಂಬ ಅವಕಾಶ ಮಾಡಿಕೊಂಡಿರುವುದು, ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿನ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕೆ ಅಧಿಕಾರ ಮಾಡಿಕೊಂಡ ವಿಧೇಯಕ ಸೇರಿದೆ.